# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

ಸಿ.ಸಿ **770/2025**

ಪಿರ್ಯಾದಿಃ ಸಂತೋಷ್ ಎಸ್.

**ವಿರುದ್ಧ**

ಆರೋಪಿ – ಮಹದೇವನಾಯಕ

## ಆಪಾದನೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿಃ11.07.2025 ರಂದು ರೂ.2,50,000/–ಗಳನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಹಣವನ್ನು ಹಿಂತಿರುಗಿರುಗಿಸುದಾಗಿ ಒಪ್ಪಿಕೊಂಡು ಅದರ ಮರುಪಾವತಿಗಾಗಿ ನೀವು ನಿಮ್ಮ ಖಾತೆಯುಳ್ಳ ಬ್ಯಾಂಕ್ ಆಫ್ ಬರೋಡಾ, ನಂಜನಗೂಡು ಶಾಖೆಯಲ್ಲಿನ ಖಾತೆಗೆ ಸೇರಿರುವ ಚೆಕ್ ಸಂಖ್ಯೆ.000003 ಇದನ್ನು ದಿನಾಂಕ 11.08.2025 ಹಾಗೂ ರೂ.2,50,000/– ಎಂದು ನಮೂದಿಸಿ ಚೆಕ್ ಅನ್ನು ಪಿರ್ಯಾದುದಾರರಿಗೆ ನೀಡಿದ್ದು, ಅವರು ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದುದಾರರು ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡಾ, ಚಿಕ್ಕಾಡೆ ಶಾಖೆಗೆ ನಗದೀಕರಿಸಲು ಹಾಜರುಪಡಿಸಿದಾಗ, ಸದರಿ ಬ್ಯಾಂಕಿನವರು ಸಹಿ ವ್ಯತ್ಯಾಸದಿಂದ ಕೂಡಿದ್ದು/ ಖತೆಯನ್ನು ನಿರ್ವಹಿಸಲು ಸಧಿಕಾರ ಸ್ವೀಕೃತವಾಗಿಲ್ಲ ಹಾಗೂ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಷರಾದೊಂದಿಗೆ ಚೆಕ್ಕನ್ನು ಅಮಾನ್ಯ ಮಾಡಿ ದಿನಾಂಕ 13.08.2025 ರಂದು ಶರಾದೊಂದಿಗೆ ಹಿಂತಿರುಗಿಸಿದ್ದು, ಅದನ್ನು ಪಡೆದುಕೊಂಡ ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ 21.08.2025 ರಂದು ನಿಮಗೆ ನೊಟೀಸನ್ನು ಕಳುಹಿಸಿದ್ದು, ಸದರಿ ನೊಟೀಸು Addressee left without Instruction ಎಂಬ ಷರದೊಂದಿಗೆ ದಿನಾಂಕ 06.09.2025 ರಂದು ವಾಪಸ್ಸಾಗಿದ್ದು. ಸದರಿ ನೋಟೀಸನ್ನು ಅವರು ಹಿಂಪಡೆದಿರುತ್ತಾರೆ. ಆರೋಪಿಯಾದ ನೀವು ನೋಟೀಸನ್ನು ಪಡೆದುಕೊಳ್ಳದೆ ಮತ್ತು ಹಣವನ್ನು ಹಿಂದಿರುಗಿಸದೇ ನೀವು ಮೋಸ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುತ್ತೀರಾ, ಬೇರೆ ಯಾವುದೇ ದಾರಿ ಇಲ್ಲದೆ ನಿಮ್ಮ ವಿರುದ್ದ ನೆಗೋಷಿಯೆಬಲ್ ಇನ್ ಸ್ಟ್ರುಮೆಂಟ್ ಕಾಯ್ದೆ ಕಲಂ 138 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ ಹಾಗೂ ಸದರಿ ಅಪಾದನೆಯು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತಹದ್ದಾಗಿರುತ್ತದೆ.

**1. Have you understood the submstance of plea read over to you?**
ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ**?**

**Yes/**ಹೌದು ☐
**No/**ಇಲ್ಲ ☐

**2. Do you admit that the Cheque belongs to your account?**
**(**ಚೆಕ್ ನಿಮ್ಮ ಖಾತೆಗೆ ಸೇರಿದೆ ಎಂದು ನೀವು ಒಪ್ಪಿಕೊಳ್ಳುತ್ತೀರಾ**?)**

**Yes/**ಹೌದು ☐
**No/**ಇಲ್ಲ ☐

**3. Do you admit that the signature on the Cheques is yours?**
**(**ಚೆಕ್‌ಗಳ ಮೇಲಿನ ಸಹಿ ನಿಮ್ಮದೇ ಎಂದು ನೀವು ಒಪ್ಪಿಕೊಳ್ಳುತ್ತೀರಾ**?)**

**Yes/**ಹೌದು ☐
**No/**ಇಲ್ಲ ☐

**4. Did you issue or deliver this Cheque to the Complainant?**
**(**ನೀವು ಈ ಚೆಕ್ ಅನ್ನು ದೂರುದಾರರಿಗೆ ನೀಡಿದ್ದೀರಾ ಅಥವಾ ತಲುಪಿಸಿದ್ದೀರಾ**?)**

**Yes/**ಹೌದು ☐
**No/**ಇಲ್ಲ ☐

**5. Do you admit that you owed liability to the Complainant at the time of issuance of the Cheque?**
**(**ಚೆಕ್ ನೀಡುವ ಸಮಯದಲ್ಲಿ ನೀವು ದೂರುದಾರರಿಗೆ ಹೊಣೆಗಾರಿಕೆಯನ್ನು ಹೊಂದಿದ್ದೀರಿ ಎಂದು ಒಪ್ಪಿಕೊಳ್ಳುತ್ತೀರಾ**?)**

**Yes/**ಹೌದು ☐
**No/**ಇಲ್ಲ ☐

**6. If you deny liability, state clearly the defence?**
**(ನೀವು ಹೊಣೆಗಾರಿಕೆಯನ್ನು ನಿರಾಕರಿಸಿದರೆ, ಅದರ ಪ್ರತಿವಾದವನ್ನು ಸ್ಪಷ್ಟವಾಗಿ ತಿಳಿಸಿ?)**

**a. Security Cheque only (**ಭದ್ರತೆಗಾಗಿ ನೀಡಿದ ಚೆಕ್**)** ☐

**b. Loan repaid already (**ಈಗಾಗಲೇ ಸಾಲ ಮರುಪಾವತಿಯಾಗಿದೆ**)** ☐

**c. Cheque altered or misused (ಚೆಕ್ ಅನ್ನು ಬದಲಾಯಿಸಲಾಗಿದೆ ಅಥವಾ ದುರುಪಯೋಗಪಡಿಸಲಾಗಿದೆ)** ☐

**d. Other (Specify) (ಇತರೆ ) (ನಿರ್ದಿಷ್ಟಪಡಿಸಿ)** ☐

**7. Do you wish to compound the case at this stage?**
**(**ಈ ಹಂತದಲ್ಲಿ ನೀವು ಪ್ರಕರಣವನ್ನು ರಾಜಿ ಮಾಡಿಕೊಳ್ಳಲು ಇಚ್ಛಿಸುತ್ತಿರೋ**?)**

**Yes/**ಹೌದು ☐

**No/**ಇಲ್ಲ ☐

(ದಿನಾಂಕ 29.06.2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ, ಕೇಳಿ, ಹೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ. )

ದಿನಾಂಕ: 29.06.2026

**ಪ್ರದಾನ ಸಿವಿಲ್ ನ್ಯಾಯಾಧೀಶರುಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**